ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 897
2. ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ
3. ಉತ್ತರಿಸಬೇಕಾದ ದಿನಾಂಕ : 21-02-2018

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	40 ವರ್ಷಗಳ ಹಿಂದೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಹಾರಂಗಿಯಲ್ಲಿ ಹಾರಂಗಿ ಜಲಾಶಯ ನಿರ್ಮಾಣವಾದ ಸಂದರ್ಭದಲ್ಲಿ ಜಾಗ ಕಳೆದುಕೊಂಡು ನಿರಾಶ್ರಿತರಾದವರಿಗೆ ಇದುವರೆಗೂ ಪುನರ್ವಸತಿ ಕಲ್ಪಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	40 ವರ್ಷಗಳ ಹಿಂದೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಹಾರಂಗಿಯಲ್ಲಿ ಹಾರಂಗಿ ಜಲಾಶಯ ನಿರ್ಮಾಣವಾದ ಸಂದರ್ಭದಲ್ಲಿ ಜಾಗ ಕಳೆದುಕೊಂಡು ನಿರಾಶ್ರಿತರಾದವರಿಗೆ ಯಡವನಾಡು ಕಾಲೋನಿ-1, ಯಡವನಾಡು ಕಾಲೋನಿ-2 ಹಾಗೂ ಅತ್ತೂರು ಕಾಲೋನಿ-1 ಮತ್ತು ಅತ್ತೂರು ಕಾಲೋನಿ-2 ಗ್ರಾಮಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿರುತ್ತದೆ.
ಆ	ಬಂದಿದ್ದಲ್ಲಿ, ಜಾಗ ಕಳೆದುಕೊಂಡು ನಿರಾಶ್ರಿತರಾದವರ ಸಂಖ್ಯೆ ಎಷ್ಟು; ಹಾಗೂ ಇದುವರೆಗೂ ಪುನರ್ವಸತಿ ಕಲ್ಪಿಸಿರುವವರ ಸಂಖ್ಯೆ ಎಷ್ಟು ಹಾಗೂ ಇನ್ನೂ ಪುನರ್ವಸತಿ ಸಿಗಬೇಕಾದವರ ಸಂಖ್ಯೆ ಎಷ್ಟು ;	12 ಗ್ರಾಮಗಳ ನಿರಾಶ್ರಿತರ ಕುಟುಂಬಗಳ ಸಂಖ್ಯೆ ಸುಮಾರು 425 ಇದ್ದು, ಇವರುಗಳಿಗೆ ಯಡವನಾಡು ಕಾಲೋನಿ-1, ಯಡವನಾಡು ಕಾಲೋನಿ-2 ಹಾಗೂ ಅತ್ತೂರು ಕಾಲೋನಿ-1 ಮತ್ತು ಅತ್ತೂರು ಕಾಲೋನಿ-2 ಗ್ರಾಮಗಳಲ್ಲಿ ಪುನರ್ವಸತಿ ಕಲ್ಪಿಸಲಾಗಿರುತ್ತದೆ. ಇನ್ನೂ ಪುನರ್ವಸತಿ ಸಿಗಬೇಕಾದವರ ಸಂಖ್ಯೆ ಇರುವುದಿಲ್ಲ.
ಇ	ಜಾಗ ಕಳೆದುಕೊಂಡ ನಿರಾಶ್ರಿತರು ಹಾರಂಗಿ ನಾಲೆಯ ದಡದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದು, ಇಂದಿಗೂ ಪುನರ್ವಸತಿಯಿಂದ ವಂಚಿತರಾಗಿದ್ದು, ಇವರಿಗೆ ಯಾವ ಕಾಲಮಿತಿಯೊಳಗೆ ಪುನರ್ವಸತಿ ಕಲ್ಪಿಸಲಾಗುವುದು ?	

ಸಂಖ್ಯೆ:ಜಸಂಇ 36 ಎನ್‌ಎಲ್‌ಎ 2018

(ಎಂ.ಬಿ.ಪಾಟೀಲ)

ಜಲ ಸಂಪನ್ಮೂಲ ಸಚಿವರು